# ಅನಿಶ್ಚಿತ ಸವಾಲಿನ ಹೋರಾಟ

◆ ನಿಮ್ಮ ಪರಿಚಯ ಹೇಳಿ..

ನನ್ನ ಊರು ಮೈಸೂರು. ನಟನೆಯನ್ನು ಅರಸಿ ಬೆಂಗಳೂರಿಗೆ ಬಂದಿದ್ದೇನೆ. ಮೊದಲ ಧಾರಾವಾಹಿ 'ಖುಷಿ'. ಅದೃಷ್ಟಕ್ಕೆ ಆರಂಭದಲ್ಲಿಯೇ ಪ್ರಧಾನ ಪಾತ್ರವನ್ನು ಮಾಡಿದೆ. ನಂತರ 'ಅಕ್ಕ', 'ಮಹಾಕಾಳಿ'ಯಲ್ಲಿ ವಿಷ್ಣು ಪಾತ್ರ ಮಾಡಿದೆ. ಈಗ 'ದೇವಯಾನಿ'. ಕಾಲೇಜು ದಿನಗಳಿಂದಲೂ ಅಭಿನಯದ ಬಗ್ಗೆ ಆಸಕ್ತಿ ಇತ್ತು. ಆಸಕ್ತಿಯ ಕಾರಣದಿಂದಲೇ ನಟನಾಗಿದ್ದೇನೆ. ಅದಕ್ಕಾಗಿ ತರಬೇತಿಯ ತರಗತಿ, ರಂಗಭೂಮಿಯ ತಾಲೀಮು ಮಾಡಲಿಲ್ಲ. ಶಾಲಾ– ಕಾಲೇಜು ದಿನಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮುಂದಿರುತ್ತಿದ್ದೆ. ಕಾಲೇಜಿನಲ್ಲಿ ನಮ್ಮದೊಂದು ತಂಡ ಇತ್ತು. ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮ ಎದುರಾದರೆ ಅದರಲ್ಲಿ ನಾನೇ ಮುಂಚೂಣಿಯಲ್ಲಿ ಇರ್ತಾ ಇದ್ದೆ. ನನ್ನ ಸ್ನೇಹಿತರ ಒತ್ತಾಸೆಗೆ ಕಿರುತೆರೆಯನ್ನು ಪ್ರವೇಶಿಸಿದಂತೆ ಆಯಿತು. ಅವರ ಸಲಹೆಯಂತೆ ನಿರಂತರ ಆಡಿಷನ್ ಕೊಡ್ತಾ ಇದ್ದೆ. ನಾಲ್ಕಾರು ಆಡಿಷನ್ ನೀಡುವಷ್ಟರಲ್ಲಿ ನನಗೂ ಆತ್ಮವಿಶ್ವಾಸ ಬಂತು 'ಖುಷಿ'ಯಲ್ಲಿ ಅವಕಾಶವೂ ಸಿಕ್ಕಿತು. ಈಗ ತೆಲುಗುನಲ್ಲಿಯೂ ಒಂದು ಧಾರಾವಾಹಿಯನ್ನು ನಿರ್ವಹಿಸುತ್ತಿದ್ದೇನೆ.



**ಕಾರ್ತಿಕ್ ಮಹೇಶ್**
ಉದಯದ 'ದೇವಯಾನಿ'ಯ ರುತ್ವಿಕ್ ಅರಸ್

◆ ನಟನಾ ಜೀವನದ ಬಗ್ಗೆ ಹೇಳುವುದಾದರೆ...

ಈ ಕ್ಷೇತ್ರದಲ್ಲಿ ನಾನು ತೃಪ್ತನಾಗಿದ್ದೇನೆ. ನನಗೆ ತುಂಬಾ ಖುಷಿ ಕೂಡ ಕೊಡ್ತಾ ಇದೆ. ಸಾಮಾನ್ಯನಾದ ನನ್ನನ್ನು ಜನ ಗುರುತಿಸುವಂತೆ ಬೆಳೆದಿದ್ದೇನೆ. ಇನ್ನೂ ಜನರನ್ನು ತಲುಪಬೇಕು ಎನ್ನುವ ಹಂಬಲ ಇದೆ. ಇಷ್ಟಕ್ಕೆ ತೃಪ್ತನಾದರೆ ಸಾಲದು ಎನ್ನುವುದು ನನ್ನ ಬಯಕೆ. ಜನ ಸಮುದಾಯದ ನಡುವೆ ನಾನು ಒಬ್ಬ ನಟ ಎಂದು ಚರ್ಚೆ ಆಗಬೇಕು. ಮುಂದೆ ಸಿನಿಮಾ ಮಾಡಬೇಕು.

◆ ನೀವು ನಿರ್ಮಾಪಕ ಆದರೆ ಎಂತಹ ಸಿನಿಮಾ ಮಾಡುತ್ತೀರಿ?

ನಾನು ನಿರ್ಮಾಪಕ ಆದರೆ ಸದಭಿರುಚಿಯ ಸಿನಿಮಾ ಮಾಡಬೇಕು. 'ಕವಲುದಾರಿ'ಯಂತೆ ಸಿನಿಮಾ ಎಲ್ಲ ವರ್ಗದವರಿಗೂ ಇಷ್ಟ ಆಗಬೇಕು. ಕಥೆಯಲ್ಲಿ ಕುತೂಹಲ ಇರಬೇಕು. ವೀಕ್ಷಕನೊಬ್ಬ ಕಥೆಯನ್ನು ಕಾದು ನೋಡಬೇಕು. ಹಾಗಿದ್ದರೆ ಸಿನಿಮಾ ನೋಡಲು ಚೆಂದ ಅನ್ನಿಸುತ್ತದೆ. ಆರಂಭದಲ್ಲಿ ಸಿನಿಮಾ ನಿರ್ಮಿಸಲು ಎರಡು– ಮೂರು ಕೋರಿಕೆಗಳು ಬಂದಿದ್ದವು. ಕಥೆ ಹಿಡಿದು ಬಂದವರೇ ನಿರ್ಮಾಣ ಮಾಡು ಎಂದು ಹುರಿದುಂಬಿಸಿದರು. ಆಗದಿದ್ದರೆ ಗೊತ್ತಿರುವ ನಿರ್ಮಾಪಕರನ್ನು ನೋಡು ಎನ್ನುವ ಆಯ್ಕೆಯನ್ನು ಮುಂದಿಟ್ಟಿದ್ದರು. ನನಗಾಗ 21 ವರ್ಷ. ಬಣ್ಣದ ಲೋಕ ಕೂಡ ಹೊಸ ಪರಿಚಯ. ಎಲ್ಲದಕ್ಕಿಂತ ಹೆಚ್ಚಾಗಿ ಅದಕ್ಕೆ ಹೂಡುವಷ್ಟು ಹಣ ಮೊದಲೇ ನನ್ನ ಬಳಿ ಇಲ್ಲ. ಈಗಾದರೆ ನಿರ್ಮಾಪಕರನ್ನು ಹುಡುಕುತ್ತಿದ್ದೇನೋ ಏನೋ? ಆಗ ಇಷ್ಟೆಲ್ಲ ಯೋಚನೆ ಮಾಡುವ ಸ್ಥಿತಿಯಲ್ಲಿಯೂ ನಾನು ಇರಲಿಲ್ಲ. ಸಿನಿಮಾವನ್ನು ಖಂಡಿತ ಮುಂದೆ ಮಾಡುತ್ತೇನೆ. ಅವಕಾಶವನ್ನು ಕಾಯುವ ಜೊತೆಗೆ ನನ್ನ ಪ್ರಯತ್ನವನ್ನು ಮಾಡುತ್ತೇನೆ.

◆ ನೀವು ಯಾವ ರೀತಿಯ ಪಾತ್ರಗಳನ್ನು ಇಷ್ಟಪಡುತ್ತೀರಿ?

ಯಾವ ಯಾವ ರೀತಿಯ ಪಾತ್ರಗಳು ನನಗೆ ಸೂಕ್ತ ಅನ್ನಿಸುತ್ತವೆಯೋ ಅವೆಲ್ಲವನ್ನೂ ಮಾಡುತ್ತೇನೆ. ನಾಲ್ಕೂ ಧಾರಾವಾಹಿಗಳಲ್ಲಿ ಭಿನ್ನ ಭಿನ್ನ ಪಾತ್ರಗಳನ್ನೇ ನಿರ್ವಹಿಸುತ್ತಿದ್ದೇನೆ. ಈಗ ನೆಗೆಟಿವ್ ಪಾತ್ರವನ್ನು ಮಾಡುತ್ತಿದ್ದೇನೆ. ನನಗೆ ಸೂಕ್ತವಾಗುವ, ಒಪ್ಪುವಂತಹ ಯಾವುದೇ ಪಾತ್ರವನ್ನಾದರೂ ನಾನು ಮಾಡಲು ಸಿದ್ಧ. ಪಾತ್ರಕ್ಕೆ ತೂಕ ಇರಬೇಕು. ರುತ್ವಿಕ್ ಅರಸ್ ಪಾತ್ರವನ್ನು ಮಾಡುವ ಆರಂಭದಲ್ಲಿ ನೆಗೆಟಿವ್ ಎನ್ನುವ ಭಯ ಇತ್ತು. ಈ ಮೊದಲಿನ ಮೂರೂ ಪಾಸಿಟಿವ್ ಪಾತ್ರಗಳು. ಜನ ಇದನ್ನು ಹೇಗೆ ಸ್ವೀಕರಿಸುತ್ತಾರೆ ಎನ್ನುವ ಅಳುಕು ಕಾಡಿತ್ತು. ನನಗೆ ಒಪ್ಪುತ್ತೆ... ಚೆನ್ನಾಗಿದೆ ಎನ್ನುವ ಮಾತನ್ನು ಜನರಿಂದ ಕೇಳಿದ್ದೇನೆ. ರುತ್ವಿಕ್ ಹಲವು ಗುಣಗಳುಳ್ಳ ಸಂಕೀರ್ಣ ವ್ಯಕ್ತಿತ್ವ. ಮಾನಸಿಕ ಅಸಮತೋಲನದ ವ್ಯಕ್ತಿತ್ವ ಸವಾಲಿನಿಂದ ಕೂಡಿದೆ. ಮುಂದೆ ಲವರ್ ಬಾಯ್ ರೀತಿಯ ಪಾತ್ರವನ್ನು ಮಾಡಬೇಕು. ಪೊಲೀಸ್ ಅಧಿಕಾರಿಯ ಪಾತ್ರವನ್ನೂ ಮಾಡಬೇಕೆನ್ನುವ ಆಸೆ ಇದೆ.

◆ ಬಣ್ಣದ ಬದುಕಿನ ಅನುಭವ ಹೇಳಿ..

ಇದು ಮಾಯಾಲೋಕ. ವೈಯಕ್ತಿಕವಾಗಿ ನಾವು ಏನೇ ಇರಬಹುದು. ಆದರೆ ಜನ ನಮ್ಮನ್ನು ವಿಶೇಷವಾಗಿ ನೋಡುತ್ತಾರೆ. ಸಮುದಾಯದ ನಡುವೆ ನಮ್ಮ ಕಷ್ಟ ಮರೆತೇ ಹೋಗುತ್ತದೆ. ನಾವು ಯಾರು ಎನ್ನುವುದು ಗೊತ್ತಿರುವುದಿಲ್ಲ. ಟೀವಿಯಲ್ಲಿ ಕಾಣುತ್ತೇವೆ ಎನ್ನುವ ಏಕೈಕ ಕಾರಣಕ್ಕೆ ನಮ್ಮನ್ನು ಪ್ರೀತಿಯಿಂದ ಮಾತನಾಡಿಸುತ್ತಾರೆ. 'ಮನೆಯಲ್ಲಿ ಚಿತ್ರಾನ್ನಾನೇ ತಿಂದ್ರು– ಹೊರಗಡೆ ಬಿರಿಯಾನಿ ತಿನ್ನೋನ ರೀತಿ ಕಾಣಿಸಿಕೋಬೇಕು' ಎನ್ನುವ ನಟ ದರ್ಶನ್ ಅವರ ಮಾತು ನಿಜಕ್ಕೂ ಸತ್ಯ. ನಮ್ಮ ಬಳಿ ಏನೂ ಇಲ್ಲದಿದ್ದಾಗ ಸಮಾಜ ಹೇಗೆ ನೋಡುತ್ತದೆ. ನಮ್ಮಲ್ಲಿ ಏನೋ ಇದೆ ಎನ್ನುವಾಗ ಹೇಗೆ ನೋಡುತ್ತದೆ ಎನ್ನುವುದನ್ನು ನನ್ನ ಅನುಭವದಿಂದಲೇ ಅರಿತಿದ್ದೇನೆ. ಅದೆಲ್ಲ ಜೀವನದ ಒಂದು ಭಾಗ ಅದರಿಂದ ನಾವು ಹೆಚ್ಚು ಕಲಿಯುತ್ತೇವೆ. ಇಲ್ಲಿ ಹೋರಾಟ ಇದ್ದೇ ಇರುತ್ತದೆ. ಅನಿಶ್ಚಿತತೆಯ ಭಯದ ನಡುವೆ ಬದುಕು ಸಾಗಬೇಕು. ನನ್ನ ಎರಡನೇ ಧಾರಾವಾಹಿಯ ನಂತರ ಏಳೆಂಟು ತಿಂಗಳು ಕಾಯಬೇಕಾಯಿತು.

■ **ರಾಘವೇಂದ್ರ ಕೆ.**